# 'ಸುಧಾ' ಜೊತೆಗಿನ ಓದುಗರ ಒಡನಾಟ

## ರುಚಿಯಾದ ಕಾಫಿಯಂತೆ 'ಸುಧಾ'

'ಸುಧಾ' ಮತ್ತು ನನ್ನ ಒಡನಾಟಕ್ಕೆ 43 ವರ್ಷ. ಹದ ಬೆರೆಸಿ ತಯಾರಿಸಿದ ಪರಿಮಳಭರಿತ, ರುಚಿಯಾದ ಕಾಫಿಯ ಸ್ವಾದದಂತೆ ಓದುಗರ ಅಭಿರುಚಿಗನುಗುಣವಾಗಿ ಜ್ಞಾನಸುಧೆ ಪಸರಿಸುವಲ್ಲಿ 'ಸುಧಾ' ಎಂದಿಗೂ ಮುಂದು.

ಮೊದಲಿಗೆ ಬಾಲವಿಹಾರದಲ್ಲಿ ವಿಹರಿಸುತ್ತಿದ್ದ ನಾನು ಮುಂದೆ ವೈವಿಧ್ಯಮಯ ಧಾರಾವಾಹಿ, ಅಂಕಣಗಳು, ಲೇಖನಗಳನ್ನು ಓದಲಾರಂಭಿಸಿದೆ. ಪ್ರವಾಸ ಲೇಖನಗಳು ನನ್ನನ್ನು ಪ್ರವಾಸಕ್ಕೆ ಪ್ರಚೋದಿಸಿದರೆ, ವೈಚಾರಿಕ ಲೇಖನಗಳು ನನ್ನಲ್ಲಿ ಚಿಂತನೆ ಹಚ್ಚಿದ್ದಂತೂ ದಿಟ!

ಶಾಲಾ ದಿನಗಳಲ್ಲಿ ಅಮ್ಮನನ್ನು ಕಳೆದುಕೊಂಡಾಗ ಅಡುಗೆ ಕಲಿಯಲು ಸಹಕರಿಸಿದವಳು ಇವಳೇ! ಹೊಸರುಚಿ ಕೆಲವೊಮ್ಮೆ ಕೈಕೊಟ್ಟಿದ್ದೂ ಉಂಟು! ಆದರೂ ಬಹುತೇಕ ವ್ಯಂಜನಗಳು ಹಸಿದ ಹೊಟ್ಟೆಯನ್ನು ಸಂತೃಪ್ತಿಗೊಳಿಸಿದ್ದಂತೂ ಸತ್ಯ. ಬಗೆ ಬಗೆಯ ರಂಗೋಲಿ ಕಲಿತದ್ದೂ ಇವಳಿಂದಲೇ! ಇದಕ್ಕಾಗಿ 'ಸುಧಾ'ಳಿಗೆ ಎಂದೂ ನಾನು ಆಭಾರಿ. ನನ್ನ ನೆಚ್ಚಿನ 'ಸುಧಾ' ನೂರರ ವರ್ಷವನ್ನೂ ಸಂಭ್ರಮಿಸಲಿ.

— ಕೆ.ಟಿ. ಜಯಶ್ರೀ, ಹಾಸನ

## ನಲ್ಮೆಯ ಸೋದರಿ,

ನನ್ನ ಸೋದರಿಯಂತೆ 'ಸುಧಾ'. ನನ್ನ ಸೋದರಿಗೂ ಈಗ 60 ವರ್ಷ. 'ಸುಧಾ' ಪತ್ರಿಕೆ ಆಗಷ್ಟೇ ಶುರುವಾಗಿದ್ದ ಕಾರಣ ನನ್ನ ತಂಗಿಗೂ 'ಸುಧಾ' ಎಂದೇ ಹೆಸರಿಟ್ಟಿದ್ದರು. ಧಾರಾವಾಹಿಗಳನ್ನು ತುಂಬಾ ಆಸೆಯಿಂದ ಓದುತ್ತಿದ್ದೆವು ನಾವು. ಅನುಪಮಾ ನಿರಂಜನರವರ ಧಾರಾವಾಹಿಗಳು ಬರುತ್ತಿದ್ದಾಗ ಅದನ್ನು ಕತ್ತರಿಸಿ ಕೂಡಿಸಿ ಹೊಲಿದು ಬೇಜಾರಾದಾಗ ಪುನಃ ಓದುತ್ತಿದ್ದೆವು, ಧಾರಾವಾಹಿಗಳ ಬಗ್ಗೆ ಅಷ್ಟು ಆಸಕ್ತಿ ಬಂದದ್ದೇ 'ಸುಧಾ'ದಿಂದ. ನಮ್ಮ ಕುಟುಂಬದ ಎಲ್ಲರಿಗೂ ಮೆಚ್ಚಿನ ವಾರಪತ್ರಿಕೆ 'ಸುಧಾ'.

—ಸಾವಿತ್ರಿ ಜಗನ್ನಾಥ್, ಬೆಂಗಳೂರು

## ವೈವಿಧ್ಯವೇ ವಿಶೇಷ

ನಾನು ಹುಟ್ಟುವ ಮೊದಲೇ ನಮ್ಮ ಮನೆಗೆ 'ಸುಧಾ' ಬರುತ್ತಿತ್ತು. ನಮ್ಮ ತಂದೆ ಶಿಕ್ಷಕರಾಗಿದ್ದರಿಂದ ಪುಸ್ತಕ ಓದುವುದರ ಮಹತ್ವದ ಬಗ್ಗೆ ನಮಗೆ ಅರಿವು ಮೂಡಿಸಿದ್ದರು. ಹಾಗಾಗಿ ನಾನು ಕನ್ನಡದ ಅಕ್ಷರ ಮಾಲೆ ಕಲಿಯುವ ಹೊತ್ತಿಗೆ 'ಸುಧಾ' ಓದಲು ಆರಂಭ ಮಾಡಿದ್ದೆ. 'ಸುಧಾ' ವಿಶೇಷ ಇರುವುದು ಅದರ ವೈವಿಧ್ಯದಲ್ಲಿ. ಎಲ್ಲಾ ವಯೋವರ್ಗದವರಿಗೂ ಓದಿಗೆ ಆಯ್ಕೆಗಳಿರುತ್ತವೆ. ಕ್ರೀಡೆ, ಮಕ್ಕಳ ಸಾಹಿತ್ಯ, ಹಾಸ್ಯ, ಸಿನಿಮಾ, ವಿಜ್ಞಾನ ಹಾಗೂ ಸಮಕಾಲೀನ ಬರಹಗಳ ಹೂರಣ 'ಸುಧಾ'.

ಧಾರಾವಾಹಿಗಳು 'ಸುಧಾ'ಕ್ಕಾಗಿ ನಾವೆಲ್ಲ ತುದಿಗಾಲಿನಲ್ಲಿ ಕಾಯುವಂತೆ ಮಾಡುತ್ತಿದ್ದವು. ನನ್ನ ಮೇಲೆ ಪ್ರಭಾವ ಬೀರಿದ ಲೇಖಕ ಯಂಡಮೂರಿ ವೀರೇಂದ್ರನಾಥ್. ಇವರ ಬಹಳಷ್ಟು ಕಾದಂಬರಿಗಳನ್ನು ನಮಗೆ ತಲುಪಿಸಿದ್ದು 'ಸುಧಾ'. ಧಾರಾವಾಹಿಗಳ ಜೊತೆಗೆ ಬರುತ್ತಿದ್ದ ಜಿ.ಕೆ. ಸತ್ಯ ಅವರ ಚಿತ್ರಗಳು ಮನಮೋಹಕ.



'ಸುಧಾ'ದಲ್ಲಿ ಬರುತ್ತಿದ್ದ ಹಲವು ಅಂಕಣಗಳು, ಕಾಮಿಕ್ಸ್ ಮತ್ತು ಧಾರಾವಾಹಿಗಳನ್ನು ಪುಸ್ತಕ ಮಾಡಿಟ್ಟಿದ್ದೇವೆ. ಈಗಲೂ ತಾಯಿ ಮನೆಗೆ ಹೋದಾಗ ಓದುತ್ತಿರುತ್ತೇವೆ. ಅತ್ಯಮೂಲ್ಯವಾದ ಧಾರಾವಾಹಿಗಳು ನಮ್ಮ ಸಂಗ್ರಹದಲ್ಲಿ ಸೇರಿವೆ. ನನ್ನ ಕಥೆ ಕೂಡ 'ಸುಧಾ'ದಲ್ಲಿ ಪ್ರಕಟವಾಗಿದೆ ಎಂದು ಹೇಳಲು ನನಗೆ ಹೆಮ್ಮೆ ಎನಿಸುತ್ತದೆ. ಗುಣಮಟ್ಟದ ಕಾಗದದೊಂದಿಗೆ ಗುಣಮಟ್ಟದ ಬರಹಗಳನ್ನು ಹೊತ್ತು ಈಗಲೂ ಅದೇ ಹುಮ್ಮಸ್ಸಿನಿಂದ ಬರುತ್ತಿರುವುದೇ ವಿಶೇಷ.

—ಪದ್ಮಲತಾ ಮೋಹನ್, ಬೆಂಗಳೂರು

## 'ಸುಧಾ'ಗಾಗಿ ಕಾತರದ ಕಾಯುವಿಕೆ

ನಾನು ಮೊದಲು ಓದಲು ಶುರು ಮಾಡಿದ್ದೇ 'ಸುಧಾ' ವಾರಪತ್ರಿಕೆಯಲ್ಲಿ ಬರುತ್ತಿದ್ದ ಕಾಮಿಕ್ಸ್‌ಗಳಿಂದ. ನಾನು ಓದಿದ ಮೊದಲನೇ ಧಾರಾವಾಹಿ 'ಕಲ್ಲು ಗೊಂಬೆ ಕರಗಿತು'. ನಂತರ 'ನಟ', 'ಹ್ಯಾಪಿ ಬರ್ತ್‌ಡೇ'... ಹೀಗೆ ಸಾಕಷ್ಟು ಧಾರಾವಾಹಿಗಳನ್ನು ಓದಿದೆ.

ಅಂದಿನಿಂದ ಇಂದಿನವರೆಗೂ 'ಸುಧಾ' ನನ್ನ ಅಚ್ಚುಮೆಚ್ಚಿನ ವಾರಪತ್ರಿಕೆ. ಆಗ ಅದರ ಬೆಲೆ 40 ಪೈಸೆ ಇತ್ತು. ಪ್ರತಿವಾರ 'ಸುಧಾ' ಬರುವ ದಿನ ಬೆಳಿಗ್ಗೆಯಿಂದಲೇ ಬಾಗಿಲಲ್ಲಿ ಕುಳಿತು ಕಾತರದಿಂದ ಕಾಯುತ್ತಿದ್ದೆ. ಇಂದಿಗೂ 'ಸುಧಾ' ತನ್ನ ಗುಣಮಟ್ಟ ಕಾಯ್ದುಕೊಂಡು ಬಂದಿದೆ.

— ಸವಿತಾ, ಹುಬ್ಬಳ್ಳಿ

## ಎಂದಿಗೂ ನನಗೆ ಹೆಮ್ಮೆ

ಸುಮಾರು 35 ವರ್ಷದ ಹಿಂದಿನ ಕಥೆ. ಬೇಸಿಗೆ ರಜೆ ಬರುತ್ತಿದ್ದಂತೆ ಎರಡು ತಿಂಗಳು ಕಾಸರಗೋಡು ಪೆರ್ಲದಲ್ಲಿನ ಮಾವನ ಮನೆಯ ಗದ್ದೆ, ಹೊಳೆ, ತೋಟ, ದೇವಸ್ಥಾನಗಳ ಒಡನಾಟ ನನ್ನದು. ಮಧ್ಯಾಹ್ನದ ಬಿಸಿಲಿಗೆ ಮನೆಯ ಅಟ್ಟದಲ್ಲಿ ಮಾವನವರು ಸಂಗ್ರಹಿಸಿದ 'ಸುಧಾ' ಪತ್ರಿಕೆ ಓದು ಆರಂಭವಾಗುತ್ತಿತ್ತು. ಜ್ಞಾನಭಂಡಾರದೊಂದಿಗೆ ಅಚ್ಚುಮೆಚ್ಚಿನ ಮಕ್ಕಳ ಕಥೆಗಳು, ಡಾಬು, ಸೂಜಿ, ಮಜನೂ ಮಜಾ. ಮೆದುಳಿಗೂ ಮೇವು.

ವಿಷಯಗಳನ್ನು ಓರಗೆಯ ಮಕ್ಕಳಲ್ಲಿ ಹಂಚಿಕೊಳ್ಳುವ ಹುಮ್ಮಸ್ಸು. ವಿದ್ಯುತ್ ಇಲ್ಲದ ಮನೆ, ರಾತ್ರಿ 7 ಗಂಟೆಗೆ ಊಟ, 7.30ರಷ್ಟರಲ್ಲಿ ಅಂಗಣದಲ್ಲಿ ಪ್ರತಿದಿನ ಎಲ್ಲರೂ ಕಥೆ ಹೇಳುವುದು ಕಡ್ಡಾಯ. 'ಸುಧಾ' ಕಥೆಗಳ ವಿಜೃಂಭಣೆ ನನ್ನಿಂದ. ಇಂದಿಗೂ ಅದೇ ಆಕರ್ಷಣೆ. ಓದಲು ಪ್ರಾರಂಭಿಸಿದರೆ ಕೆಳಗಿಡಲು ಮನಸ್ಸು ಬಾರದ ಲೇಖನಗಳು. 'ಸುಧಾ' ಎಂದಿಗೂ ನನಗೆ ಹೆಮ್ಮೆ.

—ಪಿ. ಶ್ರೀಕಾಂತ ರಾವ್, ಮಂಗಳೂರು

## ಬಾಳಿನ ಹಣತೆ

'ಸುಧಾ'ಳೊಂದಿಗಿನ ನನ್ನ ಒಡನಾಟ ಸುಮಾರು ಮೂವತ್ತು ವರ್ಷಗಳಷ್ಟು ಹಿಂದಿನದು. 1994ರಲ್ಲಿ ಶಿವಮೊಗ್ಗದ ಡಿವಿಎಸ್ ಪದವಿ ಕಾಲೇಜಿನಲ್ಲಿ ಆಂಗ್ಲ ಸಾಹಿತ್ಯದ ವಿದ್ಯಾರ್ಥಿಯಾಗಿದ್ದಾಗ ಓದಲು ಪ್ರಾರಂಭಿಸಿ ಇಂದು ಸರ್ಕಾರಿ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕನಾದ ಮೇಲೂ ಆ ಬಾಂಧವ್ಯ ನಿರಂತರವಾಗಿದೆ. ಮಕ್ಕಳಿಂದ ಹಿಡಿದು ಮುದುಕರೆನ್ನದೆ ಎಲ್ಲರ ಮೆಚ್ಚಿನ ಗೆಳತಿ 'ಸುಧಾ'. ಏಕಾಂತದಲ್ಲಿ, ಪಯಣದಲ್ಲಿ ನನ್ನ ನೆಚ್ಚಿನ ಸಂಗಾತಿ ಕೂಡ. ನನಗೆ ಅತ್ಯುತ್ತಮ ಮಾರ್ಗದರ್ಶಿಯೂ ಹೌದು.

—ಜೀವಿ ಗೊಂಡೇದಹಳ್ಳಿ